# ಲಂಬಾಣಿ ಒಗಟುಗಳಲ್ಲಿ ಸಾಮಾಜಿಕ ಸಂವೇದನೆ

**ಅಣ್ಣಪ್ಪ ಎನ್. ಮಳೀಮಠ್**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಬಾಪೂಜಿನಗರ, ಶಿವಮೊಗ್ಗ.

## ABSTRACT:

ಜನಪದ ಸಾಹಿತ್ಯ ಜನರ ಜೀವನಾಡಿಯಿಂದ ಬಂದ ಮೌಖಿಕ ಪರಂಪರೆ. ಭಾರತವು ಬಹು ಸಂಸ್ಕೃತಿಯನ್ನು ಹೊಂದಿರುವ ದೇಶ. ಇಲ್ಲಿ ಎಲ್ಲಾ ಜನಾಂಗಗಳು ತಮ್ಮದೇ ಆದ ಆಚಾರ, ವಿಚಾರ, ಸಂಸ್ಕೃತಿ, ಪರಂಪರೆಯನ್ನು ತಮ್ಮದೇ ರೀತಿಯಲ್ಲಿ ಆಚರಿಸಿಕೊಂಡು ಬಂದಿರುವುದನ್ನು ನೋಡಬಹುದು. ಜನಪದ ಸಾಹಿತ್ಯವು ಮನರಂಜನೆಯ ಭಾಗವಾಗಿ ಆರಂಭದಲ್ಲಿ ಬಂದರೂ ಅವುಗಳಲ್ಲಿ ಸಾಮಾಜಿಕ ಸಂವೇದನೆಗಳು, ನೆಲ ಸಂಸ್ಕೃತಿಯ ಮೂಲ ಬೇರುಗಳು, ಸಹಬಾಳ್ವೆಯ ಬದುಕು ಇರುವುದನ್ನು ವಿದ್ವಾಂಸರು ಗುರುತಿಸಿದರು. ಇಂತಹ ನೆಲಮೂಲ ಸಂಸ್ಕೃತಿಯನ್ನು ತನ್ನಲ್ಲಿ ಇಟ್ಟುಕೊಂಡು ಬಂದ ಜನಾಂಗಗಳಲ್ಲಿ ಲಂಬಾಣಿ ಸಮುದಾಯವು ಒಂದು. ಆ ಸಮುದಾಯದಲ್ಲಿನ ಒಗಟುಗಳನ್ನು ಪ್ರಾತಿನಿಧಿಕವಾಗಿ ಆಯ್ಕೆಮಾಡಿಕೊಂಡು, ಅವುಗಳಲ್ಲಿನ ಸಾಮಾಜಿಕ ಸಂವೇದನೆಯನ್ನು ವಿವೇಚಿಸುವುದು ಈ ಲೇಖನದ ಉದ್ದೇಶ.

ಒಗಟುಗಳ ಕಾರ್ಯ ಕುಶಲತೆಯು ಜನಾಂಗದಿಂದ ಜನಾಂಗಕ್ಕೆ ಭಿನ್ನವಾಗಿ ಕಂಡುಬಂದರು ಅವುಗಳ ಉದ್ದೇಶ ಮಾತ್ರ ಒಂದೇ ಆಗಿ ಮೇಲ್ನೋಟಕ್ಕೆ ಕಂಡುಬರುತ್ತದೆ. ಅದು ಆ ಸಮುದಾಯದ ಜೀವನಾಡಿಯಾಗಿ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿರುತ್ತದೆ. ಅಂತೆಯೇ ಹಿಂದುಳಿದ ಹಾಗೂ ಗಿರಿಜನ ವರ್ಗಗಳಲ್ಲಿ ಒಂದಾದ ಲಂಬಾಣಿಗರ ಭಾಷೆಯಲ್ಲಿ ಹಾಡು, ಕಥೆ, ಗಾದೆಗಳಂತೆಯೇ ಒಗಟುಗಳು ಕೂಡ ಅಪಾರ ಪ್ರಮಾಣದಲ್ಲಿ ಇವೆ. ಇವು ಒಂದು ಸಮುದಾಯದ ಜನಾಂಗಿಕ ವೈಶಿಷ್ಟ್ಯವನ್ನು, ಸಂಸ್ಕೃತಿಯ ಮೂಲ ಭೇರುಗಳನ್ನು ದಟ್ಟವಾಗಿ ಗರ್ಭಿಕರಿಸಿಕೊಂಡಿವೆ. ಅವುಗಳನ್ನು ಸಾಂಸ್ಕೃತಿಕ ಒಗಟುಗಳು, ಒಗಟು ಕಥೆಗಳು, ಸವಾಲುಗಳು, ಗೌಪ್ಯ ಸಂಭಾಷಣೆಗಳು ಮುಂತಾಗಿ ಈ ಒಗಟುಗಳನ್ನು ವರ್ಗಿಕರಿಸಿ ಅಧ್ಯಯನ ಮಾಡಲಾಗಿದೆ.

ಲಂಬಾಣಿ ಒಗಟುಗಳು ಆ ಸಮುದಾಯದ ನಿಗೂಢ ಲೋಕವನ್ನು ಹಾಗೂ ಅದರ ಅಂತರ್ಯದಲ್ಲಿರುವ ಸಮಾಜದ ಹಲವು ನೆಲೆಗಳನ್ನು, ನೆಲ ಸಂಸ್ಕೃತಿಯ ಬೇರುಗಳನ್ನು ತೆರೆದಿಡುತ್ತವೆ. ಹೀಗೆ ಒಂದು ಜನಾಂಗದ ಮೌಖಿಕ ಸಂಸ್ಕೃತಿಯ ಜಗತ್ತನ್ನು ಆಪ್ಯವಾಗಿ ತೆರೆದಿಡುವ ಕರ್ಯವನ್ನು ಈ ಒಗಟುಗಳು ನಿರ್ವಹಿಸುತ್ತವೆ.

## KEYWORDS:

ಸಾಹಿತ್ಯ, ಸಮುದಾಯ, ಒಗಟು, ಲಂಬಾಣಿ, ಸಮಾಜ, ಸಂವೇದನೆ.

ಜನಪದ ಸಾಹಿತ್ಯ ಜನರ ಜೀವನಾಡಿಯಿಂದ ಬಂದ ಮೌಖಿಕ ಪರಂಪರೆ. ಭಾರತವು ಬಹು ಸಂಸ್ಕೃತಿಯನ್ನು ಹೊಂದಿರುವ ದೇಶ. ಇಲ್ಲಿ ಎಲ್ಲಾ ಜನಾಂಗಗಳು ತಮ್ಮದೇ ಆದ ಆಚಾರ, ವಿಚಾರ, ಸಂಸ್ಕೃತಿ, ಪರಂಪರೆಯನ್ನು ತಮ್ಮದೇ ರೀತಿಯಲ್ಲಿ ಆಚರಿಸಿಕೊಂಡು ಬಂದಿರುವುದನ್ನು ನೋಡಬಹುದು. ಜನಪದವನ್ನು ಸಾಹಿತ್ಯದ ಭಾಗವಾಗಿ ಅಧ್ಯಯನ ಆರಂಭವಾದ ಮೇಲೆ ಇಲ್ಲಿ ಹಲವು ಪ್ರಕಾರಗಳು ಕಂಡುಬಂದವು. ಅವುಗಳನ್ನು ಗಾದೆ, ಒಗಟು, ತ್ರಿಪದಿ ಇತ್ಯಾಧಿಗಳಾಗಿ ವಿಭಾಗಿಸಿ ನೋಡುವ ಅಧ್ಯಯನ ಕ್ರಮಗಳು ಬಂದವು. ಇವೆಲ್ಲವೂ ಜನಪದರಲ್ಲಿ ಮನರಂಜನೆಯ ಭಾಗವಾಗಿ ಆರಂಭದಲ್ಲಿ ಬಂದರೂ ಅವುಗಳಲ್ಲಿ ಸಾಮಾಜಿಕ ಸಂವೇದನೆಗಳು, ನೆಲ ಸಂಸ್ಕೃತಿಯ ಮೂಲ ಬೇರುಗಳು, ಸಹಬಾಳ್ವೆಯ ಬದುಕು ಇರುವುದನ್ನು ವಿದ್ವಾಂಸರು ಗುರುತಿಸಿದರು. ಇಂತಹ ನೆಲಮೂಲ ಸಂಸ್ಕೃತಿಯನ್ನು ತನ್ನಲ್ಲಿ ಇಟ್ಟುಕೊಂಡು ಬಂದ ಜನಾಂಗಗಳ್ಲಿ ಲಂಬಾಣಿ ಸಮುದಾಯವು ಒಂದು. ಆ ಸಮುದಾಯದಲ್ಲಿನ ಒಗಟುಗಳನ್ನು ಪ್ರಾತಿನಿಧಿಕವಾಗಿ ಆಯ್ಕೆಮಾಡಿಕೊಂಡು, ಅವುಗಳಲ್ಲಿನ ಸಾಮಾಜಿಕ ಸಂವೇದನೆಯನ್ನು ವಿವೇಚಿಸುವುದು ಈ ಲೇಖನದ ಉದ್ದೇಶ.

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಒಗಟು ಅತ್ಯಂತ ಜನಪ್ರಿಯವಾಗಿದೆ. ಒಗಟು ಎಂಬ ಶಬ್ದಕ್ಕೆ ಸಂಸ್ಕೃತದಲ್ಲಿ ಮುಂಡಿಗೆ, ಪ್ರಹೇಲಿಕಾ, ಪ್ರಶ್ನೆ, ಕೂಟ, ಬ್ರಹ್ಮೋದ್ಯ, ವಿವಾದ, ಸಮಸ್ಯಾ ಎಂಬ ಸಂವಾದಿ ಪದಗಳಿವೆ. ಈ ಪದಗಳೆಲ್ಲವೂ ಒಗಟು ಪದ ಯಾವ ಅರ್ಥವನ್ನು ನೀಡುತ್ತದೆಯೋ ಅದಕ್ಕೆ ಸಮಾನವಾದ ಅರ್ಥವನ್ನು ನೀಡುವ ಪದಗಳಾಗಿವೆ. ಇಂಗ್ಲೀಷಿನಲ್ಲಿ ಇದಕ್ಕೆ Riddle ಎಂಬ ಪರ್ಯಾಯ ಪದವಿದೆ. ಕನ್ನಡದಲ್ಲಿ ಒಗಟು ಪದಕ್ಕೆ ಒಂಟು, ಪಡಪು, ಒಡಗತೆ ಮುಂತಾದ ಪದಗಳೂ ರೂಢಿಯಲ್ಲಿವೆ. ಒಗಟು ವ್ಯಾಖ್ಯೆ ಮತ್ತು ಅದರ ಸ್ವರೂಪ ಹಾಗೂ ಲಕ್ಷಣಗಳನ್ನು ಕುರಿತ ಅಧ್ಯಯನ ನಿಜಕ್ಕೂ ಮಹತ್ವಪೂರ್ಣವಾದುದು. ದೇವುಡು ನರಸಿಂಹಶಾಸ್ತ್ರಿಯವರು ತಮ್ಮ 'ಕರ್ನಾಟಕ ಸಂಸ್ಕೃತಿ'ಯಲ್ಲಿ 'ಕಣ್ಣಮುಚ್ಚಾಲೆಯ ಕಾವ್ಯದ ಸ್ವರೂಪವೇ ಒಗಟು' ಎಂದಿರುತ್ತಾರೆ. ಒಂದು ವಸ್ತುವನ್ನು ಮತ್ತೊಂದು ವಸ್ತುವಿನ ವಾದದಿಂದ ಚಮತ್ಕಾರಿಕವಾಗಿ ವರ್ಣಿಸುವುದು. ಆ ವಸ್ತುವನ್ನು ಕಂಡುಹಿಡಿಯುವಂತೆ ಹೇಳುವುದು ಒಗಟು ಎನ್ನುತ್ತಾರೆ. ಸಿ. ಪಿ. ಕೆ ಅವರು ತಮ್ಮ ಕೃತಿ 'ಜಾನಪದ ಪ್ರತಿಭೆ' ಕೃತಿಯಲ್ಲಿ, ರಾ. ಗೌ ಅವರು 'ನಮ್ಮ ಒಗಟುಗಳು' ಕೃತಿಯ ಪ್ರಸ್ತಾವನೆಯಲ್ಲಿ 'ಒಗಟು ಪ್ರಯತ್ನಪೂರ್ವಕ ಸೃಷ್ಟಿ, ಪ್ರಜ್ಞಾಪೂರ್ವಕ ಕೂಡ. . . . ವಾಸ್ತವ ಅರ್ಥವನ್ನು ಮುಚ್ಚಿಡುವ ವ್ಯಾಖ್ಯಾಯೇ ಒಗಟು. ಅನುಮಾನದ ಮೂಲಕ ಅರ್ಥಾನ್ವೇಷಣೆಗೆ ಹೊರಡಲು ಪ್ರೇರಿಸುವ ಸಂದಿಗ್ದ ಪ್ರಾಸಬದ್ದ ರಚನೆ. ಕೂಡಲೇ ಕಾರಣ ಕೊಡಲಾಗದ ಸಮಸ್ಯೆ' ಎಂದಿರುತ್ತಾರೆ. ರಾಗೌ ಅವರ 'ನಮ್ಮ ಒಗಟುಗಳು' ಕೃತಿ ಕನ್ನಡ ಒಗಟುಗಳ ಕುರಿತ ಚರ್ಚೆಯಲ್ಲಿ ಮೊದಲ ಕೃತಿ ಎಂದು ನಿಸ್ಸಂದೇಹವಾಗಿ

ಹೇಳಬಹುದು.

ಹದಿಮೂರನೆ ಶತಮಾನದ ದಶಕುಮಾರ ಚರಿತೆಯಲ್ಲಿ 'ಒಗಂಟೆ' ಎಂಬ ಪದ ಬಳಕೆಯಾಗಿದೆ. ಹನ್ನೆರಡನೆ ಶತಮಾನದಲ್ಲಿಯೂ ಎರಡನೆ ನಾಗವರ್ಮನು ತನ್ನ 'ಅಭಿದಾನ ವಸ್ತುಕೋಶ'ದಲ್ಲಿ ಒಗಂಟೆ ಎಂಬ ಶಬ್ದದ ಪ್ರಯೋಗ ಮಾಡಿದ್ದಾನೆ. ಕಾವ್ಯವಲೋಕನದಲ್ಲಿಯೂ ಈ ಪದ ಪ್ರಯೋಗ ಕಂಡುಬರುತ್ತದೆ. ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ಪ್ರಮುಖನಾದ ಅಲ್ಲಮಪ್ರಭುವಿನ ಬೆಡಗಿನ ವಚನಗಳು ಒಗಟನ್ನೆ ಕೇಂದ್ರಿಕರಿಸಿವೆ.

**ರಕ್ಕಸಿಗಿಬ್ಬರು ಮಕ್ಕಳು**
**ತೊಟ್ಟಿಲ ಮೇಲೈವರು**
**ರಕ್ಕಸಿ ಬಾಣಂತಿಯಾದರೆ ಮಕ್ಕಳಿಗಿನ್ನೆಂತೋ?**
**ತೊಟ್ಟಿಲ ತೂಗುವೆ ಜೋಗಳವಾಡುವೆ**
**ರಕ್ಕಸಿ ಬಾಣಂತಿಯ ತೊಟ್ಟಿಲು ನುಂಗಿತ್ತು**
**ಇದೇನು ಹೇಳಾ ಗುಹೇಶ್ವರ**

ಈ ವಚನದಲ್ಲಿ ರಕ್ಕಸಿ ಮಾಯೆ. ಅವಳಿಗಿಬ್ಬರು ಮಕ್ಕಳು ಜೀವ ಮತ್ತು ಪ್ರಾಣ, ತೊಟ್ಟಿಲು– ದೇಹ. ದೇಹದ ಮೇಲಿರುವ ಐವರು– ಪಂಚೇಂದ್ರಿಯಗಳು. ಮಾಯೆಯ ಕೈವಶವಾಗಿರುವ ದೇಹದ ಸ್ಥಿತಿಯನ್ನು ಅಲ್ಲಮಪ್ರಭುಗಳು ಹೀಗೆ ಹೇಳಿದ್ದಾರೆ. ಕಂತಿ ಹಂಪನ ಸಮಸ್ಯೆಗಳು, ಹರಿಹರ ದೇವನ ಮುಡಿಗೆಯ ಅಷ್ಟಕ, ಕನಕದಾಸರ ಮುಂಡಿಗೆಗಳು ಬಹುತೇಕ ಒಗಟಿನ ರೂಪವನ್ನು ಹೋಲುತ್ತವೆ. ಸರ್ವಜ್ಞ ಕವಿ ತನ್ನ ಅನೇಕ ತ್ರಿಪದಿಗಳಲ್ಲಿ ಒಗಟುಗಳನ್ನು ಬಳಸಿದ್ದಾನೆ.

**ಕಲ್ಲರಳಿ ಹೂವಾಗಿ ಎಲ್ಲರಿಗೂ ಬೇಕಾಗಿ**
**ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ**
**ಬಲ್ಲವರು ಹೇಳಿ ಸರ್ವಜ್ಞ**

ಇದರ ಉತ್ತರವು ಸುಣ್ಣವೆಂದಾಗುತ್ತದೆ. ಸರ್ವಜ್ಞ ಹಲವಾರು ಒಗಟುಗಳನ್ನು ತಾನೇ ರಚಿಸಿದ್ದರೂ ಅವನು ಜನಪದರಲ್ಲಿದ್ದ ಅನೇಕ ಒಗಟುಗಳನ್ನು ಬಳಸಿಕೊಂಡಿರುವುದು ಕಾಣಬರುತ್ತದೆ. ಸುಮಾರು ಕ್ರಿ. ಶ 1750 ರಲ್ಲಿದ್ದ ರೇವಣಸಿದ್ಧ ಕವಿಯ ಮರುಳೇಶ ಸಾಂಗತ್ಯದಲ್ಲಿ ಒಗಟು ರೂಪದ ನೂರಾರು ಪದ್ಯಗಳು ಲಭ್ಯವಾಗುತ್ತವೆ ಅವುಗಳಲ್ಲಿ

**ಹೊರಗೆ ಸೀಗೆಯ ಮೆಳೆ ಒಳಗೆ ಕಂಚಿನ ಕೋಟೆ**
**ಬೆರೆದಿರೆ ಸುಣ್ಣಗಾರೆಯಲಿ**
**ಇರುವ ಲಿಂಗಕೆ ಧಾರೆ ಎರೆವ ದ್ವಾರವು ಮೂರು**
**ಮೆರೆವಂಥ ಪಸರುಗಳಿಹವು**

ಈ ಸಾಂಗತ್ಯ ಪದ್ಯದಲ್ಲಿ ತೆಂಗಿನ ಕಾಯಿಯ ಹೆಸರನ್ನು ಗುಪ್ತವಾಗಿಟ್ಟು ಅದರ ಸ್ವರೂಪವನ್ನು ಮಾತ್ರ ತಿಳಿಸಿದೆ. ಹೀಗೆ ಜನಪದ ಸಾಹಿತ್ಯದಲ್ಲಿ ಜನಮಾನಸವನ್ನು ಸೆಳೆದಿರುವ ಒಗಟುಗಳು ಜನಸಾಮಾನ್ಯರ ಬುದ್ಧಿವಂತಿಕೆಯ ಕನ್ನಡಿಯಾಗಿದೆ. ಭಾರತ ಜೀವಂತ ಜಾನಪದದ ಸಮೃದ್ಧ ತವರು ಎಂಬುದಾಗಿ ವಿದೇಶಿ ವಿದ್ವಾಂಸರು ಖಚಿತವಾದ ದನಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದು ಇಂತಹ ಒಗಟುಗಳನ್ನು ನೋಡಿ, ತಿಳಿದು ಇರಬಹುದು ಎಂದೆನಿಸುತ್ತದೆ.

ಒಗಟುಗಳ ಕಾರ್ಯ ಕುಶಲತೆಯು ಜನಾಂಗದಿಂದ ಜನಾಂಗಕ್ಕೆ ಭಿನ್ನವಾಗಿ ಕಂಡುಬಂದರು ಅವುಗಳ ಉದ್ದೇಶ ಮಾತ್ರ ಒಂದೇ ಆಗಿ ಮೇಲ್ನೋಟಕ್ಕೆ ಕಂಡುಬರುತ್ತದೆ. ಅದು ಆ ಸಮುದಾಯದ ಜೀವನಾಡಿಯಾಗಿ ತಲೆಮಾರಿನಿಂದ ತಲೆಮಾರಿಗಿ ಹರಿದು ಬಂದಿರುತ್ತದೆ. ಅಂತೆಯೇ ಹಿಂದುಳಿದ ಹಾಗೂ ಗಿರಿಜನ ವರ್ಗಗಳಲ್ಲಿ ಒಂದಾದ ಲಂಬಾಣಿಗರ ಭಾಷೆಯಲ್ಲಿ ಹಾಡು, ಕಥೆ, ಗಾದೆಗಳಂತೆಯೇ ಒಗಟುಗಳು ಕೂಡ ಅಪಾರ ಪ್ರಮಾಣದಲ್ಲಿ ಇವೆ. ಇವು ಒಂದು ಸಮುದಾಯದ ಜನಾಂಗಿಕ ವೈಶಿಷ್ಟ್ಯವನ್ನು, ಸಂಸ್ಕೃತಿಯ ಮೂಲ ಬೇರುಗಳನ್ನು ದಟ್ಟವಾಗಿ ಗರ್ಭಿಕರಿಸಿಕೊಂಡಿವೆ. ಅವುಗಳನ್ನು ಸಾಂಸ್ಕೃತಿಕ ಒಗಟುಗಳು, ಒಗಟು ಕಥೆಗಳು, ಸವಾಲುಗಳು, ಗೌಪ್ಯ ಸಂಭಾಷಣೆಗಳು ಮುಂತಾಗಿ ಈ ಒಗಟುಗಳನ್ನು ವರ್ಗಿಕರಿಸಬಹದು.

ಲಂಬಾಣಿ ಸಂಸ್ಕೃತಿಯ ಒಗಟುಗಳು ಅಧ್ಯಯನ ದೃಷ್ಟಿಯಿಂದ ಅವು ನಿರ್ವಹಿಸುವ ರೀತಿ ಅತ್ಯಂತ ಮಹತ್ವಪೂರ್ಣವಾದುದು. ಲಂಬಾಣಿ ಸಂಪ್ರದಾಯ, ಆಚರಣೆ, ಪರಂಪರೆ, ನ್ಯಾಯ–ನಿಷ್ಠೆ ಹೀಗೆ ಅವರ ಸಂಸ್ಕೃತಿಯ ಬಹು ಅಮೂಲ್ಯವಾದ ಮಾಹಿತಿಗಳಿಗೆ ಅವರ ಒಗಟುಗಳು ಆಕರವಾಗುತ್ತವೆ.

**ಉದಾಹರಣೆಗೆ:**

**ಕಾಂದೇ ಕೊರಾಡ**
**ಲಕಡ್ಯಾನ ಜಾವ ಜೊ**
**ಕಾಚ್ಚಿ ಮತ್ ಕಾಟಜೊ**
**ಸುಕಿ ಮತ್ ಲಾವಜೊ**
**ಲಕ್ಡಿ ಬನಾ ಘರ್ ಮತ್ ಆವಜೊ: ಕೊರಾಡಿರ್ ದಾಂಡೊ**
**ಹೆಗಲಣ್ಣ ಕೊಡ್ಲಣ್ಣ**
**ಕಟ್ಟಿಗೆಗೆ ಹೋದರು**
**ಹಸಿಯದನ್ನು ಕಡಿಯದಿರಿ**
**ಒಣಗಿರುವುದನ್ನು ತರದಿರಿ**
**ಕಟ್ಟಿಗೆ ಇಲ್ಲದೆ ಮನೆಗೆ ಬರದಿರಿ: ಕೊಡ್ಲಿ ಕಾವು**

ಲಂಬಾಣಿ ಬುಡಕಟ್ಟಿನ ಮೂಲವೃತ್ತಿ ವ್ಯಾಪಾರವಾಗಿತ್ತು. ಅದು ನಿಂತ ಹೋದ ಮೇಲೆ ಅವರಲ್ಲಿ ಬಹುಪಾಲು ಜನರು ಕಾಡಿನಿಂದ ಕಟ್ಟಿಗೆಯನ್ನು ತಲೆಯ ಮೇಲೆ ಹೊತ್ತು ತಂದು ಪಟ್ಟಣಗಳಲ್ಲಿ ಮಾರಿ ಜೀವನವನ್ನು ಮಾಡಲಾರಂಬಿಸಿದರು. ಇಲ್ಲಿರುವ 'ಹಸಿಯದನ್ನು ಕಡಿಯದಿರಿ' ಅನ್ನುವ ಮಾತು ಬಹಳ ಮುಖ್ಯವೆನಿಸುತ್ತದೆ. ಕಟ್ಟಿಗೆಯನ್ನು ಮಾರಿ ಜೀವನ ಸಾಗಿಸುವ ವೃತ್ತಿಯಾಗಿದ್ದರೂ ಪರಿಸರದ ಕಾಳಜಿ ಅವರಲ್ಲಿತ್ತು. ನಮ್ಮ ನಾಡಿನ ಜನಪದರು ಪರಿಸರದೊಂದಿಗೆ ಭಾವನಾತ್ಮಕ ಸಂಬಂಧವನ್ನು ಹೊಂದಿದ್ದರು ಅನ್ನುವುದನ್ನು ಇಂತಹ ಒಗಟುಗಳು ಸೂಚಿಸುತ್ತವೆ. ಜೊತೆಗೆ ಮೇಲಿನ ಒಗಟು ಲಂಬಾಣಿಗರ ಬದಲಾದ ವೃತ್ತಿಯ ಹಿನ್ನೆಲೆಯಲ್ಲಿ ಈ ಒಗಟು ಹುಟ್ಟಿಕೊಂಡಿದೆ.

ಪ್ರಾಣಿ ಮತ್ತು ಪ್ರಕೃತಿಗೆ ಸಂಬಂಧಿಸಿದಂತೆ ಒಗಟುಗಳು ಲಂಬಾಣಿಗಳಲ್ಲಿ ಹೇರಳವಾಗಿವೆ. ಅತ್ಯಂತ ಸ್ವಾರಸ್ಯಕರವಾಗಿಯೂ ಇವೆ. ಉದಾಹರಣೆಗೆ

**ದೋಸೇನ್ ಅಂದ್ರೋಜ್ ಲಾಗೊ**
**ಹೊಯಿ ಅಂದೆರಿ ರಾತ್**
**ಬಗರ್ ಬಾಪೆರ್ ಬೇಟಾಹೂಯೋ**
**ದುನಿಯಾ ಮತ್‌ಕರೋ ಗಮಾನ್ ದೊ ದಿನ್ ಹಾಟೇಮಾಯಿ**
**ಹೇಳಲೇ ಬೇಕಾದ ಪ್ರಸಂಗ**
**ಆಯಿತು ಕತ್ತಲ ರಾತ್ರಿ**
**ತಂದೆಯಿಲ್ಲದ ಮಗ ಹುಟ್ಟಿದ**
**ಮಾನವ ಮಾಡದಿರು ಜಂಬ ಎರಡು ದಿನದ ಸಂತೆ**

ತಂದೆಯಿಲ್ಲದೆ ಹುಟ್ಟಿದ ಮಗನಾರು? ಎಂಬುದು ಇಲ್ಲಿಯ ಒಗಟು. ಇದರ ಉತ್ತರ ಕಣಜ. ಕಣಜದ ಹುಳುವಿನ ಜೀವನ ಕ್ರಮವನ್ನು ಅರಿತವರು ಮಾತ್ರ. ಈ ಒಗಟನ್ನು ಉತ್ತರಿಸಲು ಸಾಧ್ಯವಾಗುತ್ತದೆ. ಕಣಜವು ಮನೆಯ ಗೋಡೆ, ಹಂಚುಗಳ ಸಂದುಗಳಲ್ಲಿ, ಮರದ ಪೊಟರೆಗಳಲ್ಲಿ ಮಣ್ಣಿನಿಂದ ಗೂಡನ್ನು ಕಟ್ಟಿ ವಾಸಿಸುವ ಒಂದು ಕೀಟ ಜಾತಿಯ ಪ್ರಾಣಿ. ಇದು ಭ್ರೂಣಾವಸ್ಥೆಯಲ್ಲಿರುವ ಯಾವುದಾದರೂ ಒಂದು ಹುಳುವನ್ನು ತಂದು ತನ್ನ ಗೂಡಿನಲ್ಲಿ ಸಾಕುತ್ತದೆ. ಆ ಹುಳುವು ಕಣಜದ ಗೂಡಿನಲ್ಲಿ ಕ್ರಮೇಣ ತನ್ನನ್ನು ಸಾಕಿದ ಕಣಜದ ಹಾಗೆಯೇ ರೂಪಾಂತರಗೊಂಡು ಬೆಳೆಯುತ್ತದೆ. ಹೀಗೆ ತಂದೆಯಿಲ್ಲದೆ ಜೀವಿಯೊಂದು ಉತ್ಪತ್ತಿಯಾಗುತ್ತದೆ. ಜೀವ ಜಗತ್ತಿನ ಈ ವಿಸ್ಮಯವನ್ನು ಒಗಟಿನ ರೂಪದಲ್ಲಿ ಹಿಡಿದಿಟ್ಟ ಲಂಬಾಣಿ ಜನಪದನೋರ್ವನ ಜಾಣ್ಮೆ ಅಪೂರ್ವವಾಗಿದೆ.

**ಅಕ್ಕಡಕಾ ಬೇಂಸ್**
**ಚಿಕ್ಕಡಕಾ ಪಾಡಾ**
**ದೂದ್ ಛ ಪಣ್ ಹರ್ ಕರೇನಿ: ಸಿಂದಿರ್ ಬುಂಗಾ**

**ಅಕ್ಕಡದ ಎಮ್ಮೆ**
**ಚಿಕ್ಕಡದ ಎಮ್ಮೆ ಕರು**
**ಕೆಚ್ಚಲಲಿ ಹಾಲಿದ್ದರೂ ಕರುವಿನ ಮೇಲೆ ಬಯಕೆಯಿಲ್ಲ**
**ಈಚಲು ಮರ-ಹೆಂಡ ಇಳಿಸುವ ಕುಂಭ (ಗಡಿಗೆ)**

ಈಚಲು ಮರದಿಂದ ಸೇದಿ ಇಳಿಸುವ ಕ್ರಿಯೆಯನ್ನು ಈ ಒಗಟು ಧ್ವನಿಸುತ್ತದೆ. ಈ ಒಗಟು ನಿರ್ಮಾತೃವಿನ ಕಲ್ಪನೆಯಲ್ಲಿ ಈಚಲು ಮರವು ಕರು ಹಾಕಿದ ಎಮ್ಮೆ. ಸದಾ ಮರಕ್ಕೆ ಅಂಟಿಕೊಂಡೇ ಇರುವ ಸೇಂದಿಯನ್ನು ಇಳಿಸುವ ಕುಂಭ (ಗಡಿಗೆ) ಎಮ್ಮೆಯ ಕರು. ಲೋಕದ ಎಮ್ಮೆಗೆ ಕರುವಿನ ಮೇಲೆ ಅಪಾರ ಮಮತೆ, ಪ್ರೀತಿಯಾದರೆ, ಈ ವೃಕ್ಷ ಎಮ್ಮೆಗೆ ಕರುವಿನ ಮೇಲೆ ಕಿಂಚಿತ್ತು ಬಯಕೆ ಇಲ್ಲ. ಏಕೆಂದರೆ ಈ ಕರು ಕುಡಿಯುವುದು ಹಾಲನ್ನಲ್ಲ. ಬದಲಾಗಿ ಅದರ ಜೀವರಸವನ್ನು. ಅಷ್ಟಲ್ಲದೆ ಕುಂಭವೆಂಬ ಕರುವನ್ನು ಎಮ್ಮೆ ಈದುದಲ್ಲ. ಯಾರೋ ಹೊರಗಡೆಯಿಂದ ತಂದು ಕಟ್ಟಿರುವುದು. ಇಂತಹ ಸ್ಥಿಯಲ್ಲಿ ತಾಯಿಗೆ ಕರುವಿನ ಮೇಲೆ ಮಮತೆ ಇರಲು ಸಾಧ್ಯವಿಲ್ಲ. ಇಲ್ಲಿನ ಕಲ್ಪನಾಶಕ್ತಿ ರಮ್ಯವಾಗಿದೆ.

**ಏಕ್ ಟಾಂಗೇರ್ ಚಲಕೋಡಿ**
**ಓರ್ ನೌ ಫಾಂಕೆ**
**ಓರ್ ಲಕ್ಯೂಸಿ ಬೇಟ್ಬೇಟಾ: ಜಾರ್.**
**ಒಂಟಿ ಕಾಲಿನ ಹಕ್ಕಿ**
**ಅದಕ್ಕೆ ಒಂಬತ್ತು ರೆಕ್ಕೆ**
**ಅದರ ಲಕ್ಷಾನು ಮಕ್ಕಳು: ಜೋಳ**

**ಕಾಕಿ ಕಾಕಿ ಛಾಡ್ ದೇಕ್**
**ಪೂಲ್ ಖಾನ್ ಫಳ್ ದೇಕ್: ಅಂಬಾ**
**ಚಿಕ್ಕಮ್ಮ ಚಿಕ್ಕಮ್ಮ ಮರನೋಡೆ**
**ಹೂವು ನುಂಗಿದ ಫಲ ನೋಡೆ: ಮಾವಿನ ಹಣ್ಣು**

**ಕಾಳೋ ಹಡಕ ಧೋಳೋ ಮಾಸ್**
**ವನಸ್ಪತಿರ್ ಮಾಯಿ**
**ಓನ್ ಖಾಯೇ ವಾಳೋ ನರ್ಕೂಣ್ : ಸೀತಾಫಳ್**

**ಕಪ್ಪು ಎಲುಬು ಬಿಳಿ ಮಾಂಸ**
**ವನಾಂತರದಲ್ಲಿರುವುದು**
**ಅದನ್ನು ತಿನ್ನುವ ಧೀರನಾರು: ಸೀತಾಫಲ**

**ಖಾಜಾಳಿನ್ ಮುಚ್ಚಾಳಿ**

**ಹಾಟೇನ್ ಜಾವ. : ಫಣಸ್, ಮಕ್ಕಾ**
**ಹುರುಕಿ, ಮೀಸೆ ಬುರುಕಿ**
**ಸಂತೆಗೆ ಹೋದವು: ಹಲಸು, ಗೋವಿನ ಜೋಳ**

**ಛೋ ಮೀನಾರ್ ಛೋರಿ**
**ನೌ ಮೀನಾರ್ ಪೇಟ್**
**ಆವತೊ ಕ ಥೇಟ್**
**ನವತೊ ಕರಲ ವತ್ಜ್ ಮೇಟ್: ಸಾಳ್**
**ಆರು ತಿಂಗಳ ಕೂಸು**
**ಒಂದು ತಿಂಗಳ ಬಸಿರು**
**ಬಂದರೇ ಹೇಳು ಥಟ್ಟನೆ**
**ಇಲ್ಲಾಂದ್ರರೆ ಆಗು ಗಪ್ಪನೆ : ಭತ್ತ**

ಬಿತ್ತಿದ ಆರು ತಿಂಗಳಿಗೆ ತೆನೆ ತುಂಬಿ ನಿಲ್ಲುವ ಭತ್ತದ ವೈಶಿಷ್ಟ್ಯವನ್ನು ಒಗಟಾಗಿ ವರ್ಣಿಸಲಾಗಿದೆ.

**ಬಾರವರಸೇರ್ ಬಾಟಿ**
**ಏಕ್ವರಸೇರ್ ಲಗಾವನ್ : ಬಿದ್ರಿ, ಗಾಝು**
**ಹನ್ನೆರಡು ವರ್ಷಕ್ಕೊಮ್ಮೆ ರೊಟ್ಟಿ**
**ಒಂದು ವರ್ಷಕ್ಕೊಮ್ಮೆ ಪಲ್ಯ : ಬಿದಿರಕ್ಕಿ, ಅಣಬೆ**

ಬಿದಿರು ಹನ್ನೆರಡು ವರ್ಷಗಳಿಗೊಮ್ಮೆ ಹೂ ಬಿಟ್ಟು ಕಾಳುಗಟ್ಟುತ್ತದೆ. ಬಿದಿರಿನ ಅಕ್ಕಿಯ ಹಿಟ್ಟಿನಿಂದ ಲಂಬಾಣಿಗಳು ರೊಟ್ಟಿ ಮಾಡುತ್ತಾರೆ. ಆದುದರಿಂದ ಇದು ಹನ್ನೆರಡು ವರ್ಷಗಳಿಗೊಮ್ಮೆ ಸಿಗುವ ರೊಟ್ಟಿ, ಮಳೆಗಾಲದಲ್ಲಿ ಕಾಡಿನಲ್ಲಿ ಬೆಳೆಯುವ ಅಣಬೆಯ ಪಲ್ಯವನ್ನು ಮಾಡುತ್ತಾರೆ. ಇದು ವರ್ಷಕ್ಕೊಮ್ಮೆ ಮಾತ್ರ ಸಿಗುವುದರಿಂದ ಇದು ವರ್ಷದ ಪಲ್ಯವೆನಿಸಿದೆ. ಗುಡ್ಡಗಾಡು ವಾಸಿಗಳಾದ ಲಂಬಾಣಿಗಳು ಕಾಡಿನ ಮೂಲದ ವಸ್ತುಗಳ ಬಳಕೆಯನ್ನು ಬಲ್ಲವರು. ಪ್ರಕೃತಿಯ ಅನೇಕ ವಸ್ತುಗಳನ್ನು ಒಗಟಿನ ರೂಪದಲ್ಲಿ ಹಿಡಿದಿಡುವ ಜಾಣರು ಲಂಬಾಣಿಗಳು ಆಗಿದ್ದಾರೆ ಅನ್ನುವುದು ಇದರಿಂದ ಅರಿವಾಗುತ್ತದೆ.

ಹೀಗೆ ಲಂಬಾಣಿ ಒಗಟುಗಳು ಆ ಸಮುದಾಯದ ನಿಗೂಢ ಲೋಕವನ್ನು ಹಾಗೂ ಅದರ ಅಂತರ್ಯದಲ್ಲಿರುವ ಸಮಾಜದ ಹಲವು ನೆಲೆಗಳನ್ನು, ನೆಲ ಸಂಸ್ಕೃತಿಯ ಬೇರುಗಳನ್ನು ತೆರೆದಿಡುತ್ತವೆ. ಹೀಗೆ ಒಂದು ಜನಾಂಗದ ಮೌಖಿಕ ಸಂಸ್ಕೃತಿಯ ಜಗತ್ತನ್ನು ಆಪ್ತವಾಗಿ ತೆರೆದಿಡುವ ಕಾರ್ಯವನ್ನು ಈ ಒಗಟುಗಳು ನಿರ್ವಹಿಸುತ್ತವೆ.

**ಪರಾಮರ್ಶನ ಗ್ರಂಥಗಳು:**


1. ಸಣ್ಣರಾಮ, (2016), ದಲಿತ ಚಳವಳಿ ನೆನ್ನೆ–ಇಂದು–ನಾಳೆ, ನೇಕಾರ ಪ್ರಕಾಶನ, ಶಿವಮೊಗ್ಗ.
2. ಮೊಗಳ್ಳಿ ಗಣೇಶ, (2006), ದಲಿತ ಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
3. ಇಂದಿರಾ ಕೃಷ್ಣಪ್ಪ (ಸಂ), (2007), ಬಯಲು? ಬೆತ್ತಲೆ! ಚಂದ್ರಗುತ್ತಿ, ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್, ಬೆಂಗಳೂರು.
4. ಅರವಿಂದ ಮಾಲಗತ್ತಿ (ಸಂ), (2006), ದಲಿತ ಮಾರ್ಗ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
5. ಅಣ್ಣಪ್ಪ ಎನ್. ಮಳೀಮಠ್, (2015, ಸ್ವಾತಂತ್ರ್ಯ ಚಳವಳಿ ಮತ್ತು ಕನ್ನಡ ಸಾಹಿತ್ಯ, ಮೇಘ ಪಬ್ಲಿಕೇಷನ್ಸ್, ಬೆಂಗಳೂರು.
6. ಶ್ರೀಕಂಠ ಕೂಡಿಗೆ, (1999), ಕನ್ನಡ ಲಾವಣಿಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಪ್ರಶಾಂತ ನಾಯಕ ಜಿ. , (2007), ಕನ್ನಡ ಸಾಹಿತ್ಯ ಮತ್ತು ದಲಿತ ಪರಂಪರೆ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ.
8. ಸಣ್ಣರಾಮ, (2020), ಲಂಬಾಣಿ ಸಂಸ್ಕೃತಿ, ನೇಕಾರ ಪ್ರಕಾಶನ, ಸೊರಬ.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4. 0 International License.